# 1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು

## ಎಸ್.ಸಿ. ನಂ.89/2020

ಚಾಸಾಃ 37 ಪ್ರಾಸಾಃ 20

**ದಿನಾಂಕ 19.02.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

| | |
|---|---|
| ಹೆಸರು | ಶ್ರೀಧರ್ ಎಸ್ |
| ತಂದೆಯ ಹೆಸರು | ಲೇಟ್ ಸಿದ್ದೇಗೌಡ |
| ವಯಸ್ಸು | 55 ವರ್ಷ |
| ಕೆಲಸ | ಡಿವೈ ಎಸ್ ಪಿ , ವಿಶೇಷ ತನಿಖಾ ತಂಡ , ಕರ್ನಾಟಕ ಲೋಕಾಯುಕ್ತ , ಬೆಂಗಳೂರು |
| ವಾಸಸ್ಥಳ | ಬೆಂಗಳೂರು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿ 18-07-19 ರಿಂದ ದಿ 13-08-2020 ರವರಿಗೆ ಕ್ಯಾತ್ಸಂದ್ರ ವೃತ್ತದಲ್ಲಿ ಪೊಲೀಸ್ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಈ ಪ್ರಕರಣಕ್ಕೆ ಸಂಬಂದಿಸಿದಂತೆ ದಿ 30-01-20 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ-36 ರಾಮಪ್ರಸಾದ್ ರವರಿಂದ ಮುಂದಿನ ತನಿಖೆಗಾಗಿ ಪಡೆದುಕೊಂಡಿರುತ್ತೇನೆ. ನಂತರ ಅದೇ ದಿನ ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾಸಾ-17 ,18 ರವರಿಗೆ ನೋಟೀಸ್ ನೀಡಿ ಹಾಜರುಪಡಿಸಿಕೊಂಡಿದ್ದು , ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಬೆಳಗಿನ ಜಾವ 00.30 ಗಂಟೆಯಿಂದ 1.45 ಗಂಟೆಯವರಿಗೆ ಕೃತ್ಯ ನಡೆದ

ಸ್ಥಳದ ಪಂಚನಾಮೆಯನ್ನು ಕೈಗೊಂಡಿರುತ್ತೇನೆ. ಕೃತ್ಯ ನಡೆದ ಸ್ಥಳದಲ್ಲಿ ರಸ್ತೆಯ ಮೇಲೆ ಚೆಲ್ಲಿದ ರಕ್ತವನ್ನು ಹತ್ತಿಯಿಂದ ಶೇಖರಿಸಿ ಒಂದು ಪ್ಲಾಸ್ಟಿಕ್ ಬಾಟಲಿನಲ್ಲಿ ಹಾಕಿರುತ್ತೇನೆ. ಅದೇ ರೀತಿ ಕೃತ್ಯ ನಡೆದ ಸ್ಥಳದಲ್ಲಿ ಇದ್ದ ಕೆಎ-06-ಇಪಿ-6355 ರಾಯಲ್ ಎನ್ ಫಿಲ್ಡ್ ದ್ವಿಚಕ್ರವಾಹನದ ಮೇಲೆ ಇದ್ದ ರಕ್ತವನ್ನು ಹತ್ತಿಯಿಂದ ಶೇಖರಿಸಿ ಒಂದು ಪ್ಲಾಸ್ಟಿಕ್ ಬಾಟಲಿನಲ್ಲಿ ಹಾಕಿರುತ್ತೇನೆ. ಕೃತ್ಯ ನಡೆದ ಜಾಗದಲ್ಲಿ ರಕ್ತದಕಲೆಯಾಗಿರುವ ಒಂದು ಜೊತೆ ಚಪ್ಪಲಿ ದೊರಕಿದ್ದು , ಅವುಗಳನ್ನು ಕ್ರಮ ಸಂಖ್ಯೆ 1 ,3 ನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯ ಚೀಲದಲ್ಲಿ ಹಾಕಿ ಭದ್ರಪಡಿಸಿ ಬಾಯಿಹೊಲಿದು ಕೆ ಎಂಬ ಇಂಗ್ಲೀಷ್ ಅಕ್ಷರದ ಸೀಲ್ ಮಾಡಿರುತ್ತದೆ. ಹಾಗೆ ಅಲ್ಲಿ ಇದ್ದ ದ್ವಿಚಕ್ರವಾಹನವನ್ನು ಸಹ ವಶಪಡಿಸಿಕೊಂಡಿರುತ್ತೇವೆ. ಪಂಚನಾಮೆಯನ್ನು ಈಗಾಗಲೇ ನಿಪಿ-2 ಎಂದು, ಸಾಕ್ಷಿನು ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ವಶಪಡಿಸಿಕೊಂಡಿರುವ ಮುದ್ದೆ ಮಾಲುಗಳನ್ನು ನ್ಯಾಯಾಲಯದ ಮುಂದೆ ಇದ್ದು ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ಮುಮಾ-6 ರಿಂದ 8 ಎಂದು ಮತ್ತು ದ್ವಿಚಕ್ರವಾಹನದ ಫೋಟೋಗಳನ್ನು ನಿಪಿ-3 ರಿಂದ 7 ಎಂದು ಗುರುತಿಸಲಾಗಿದೆ. ಮೇಲ್ಕಂಡ ವಸ್ತುಗಳನ್ನು ಠಾಣಾ ಪಿ ಎಫ್ 15/20 ರಲ್ಲಿ ನಮೂದಿಸಿಕೊಂಡು ಅವುಗಳನ್ನು ವಿದಿ ವಿಜ್ಞಾನ ಪ್ರಯೋಗಾಲಯಕ್ಕೆ

ತಜ್ಞರ ಪರೀಕ್ಷೆಗಾಗಿ ಕಳುಹಿಸಿಕೊಡಲು ಮಾನ್ಯ ನ್ಯಾಯಾಲಯದ ಅನುಮತಿಗಾಗಿ ನಿವೇದಿಸಿಕೊಳ್ಳಲಾಗಿದೆ.

2) ಮೃತ ಪಾಲನೇತ್ರಯ್ಯರವರ ಶವವು ಸ್ಥಳದಲ್ಲಿ ಇದಿದ್ದರಿಂದ ಅಲ್ಲಿ ಜನಸಂದ್ರಾಣಿ ಹೆಚ್ಚಾಗಿದ್ದು ಸಂಚಾರಕ್ಕೆ ತೊಂದರೆ ಉಂಟಾಗುತ್ತಿದ್ದರಿಂದ ಪಾಲನೇತ್ರಯ್ಯರವರ ಮೃತದೇಹವನ್ನು ಹೆಚ್ ಸಿ-357 ರವರ ಬೆಂಗಾವಲಿನಲ್ಲಿ ತುಮಕೂರು ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಅಂಬ್ಯೂಲೆನ್ಸ್ ಮೂಲಕ ರವಾನಿಸಲಾಯಿತು.

3) ಅದೇ ದಿನ ಸಿಬ್ಬಂದಿಗಳಾದ ಚಾಸಾ-29 ,31 ರವರೊಂದಿಗೆ ತುಮಕೂರು ಜಿಲ್ಲಾ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಭೇಟಿ ನೀಡಿ ಪಂಚರಾದ ಚಾಸಾ-10 ರಿಂದ 12 ರವರುಗಳಿಗೆ ನೋಟೀಸ್ ನೀಡಿ ಹಾಜರುಪಡಿಸಿಕೂಂಡು ಬೆಳಗ್ಗೆ 8 ಗಂಟೆಯಿಂದ 10 ಗಂಟೆಯವರಿಗೆ ಮೃತ ಪಾಲನೇತ್ರಯ್ಯರವರ ಶವದ ಶವಪಂಚನಾಮೆಯನ್ನು ಕೈಗೊಂಡಿರುತ್ತೇನೆ. ಶವಪಂಚನಾಮೆಯ ಕಾಲದಲ್ಲಿ ಶವದ ಮೇಲೆ ಈ ಕೆಳಕಂಡ ಗಾಯಗಳು ಕಂಡು ಬಂದಿತು.

1. ತಲೆಯ ಬಲಭಾಗದ ಕಿವಿಯಹಿಂಭಾಗದಿಂದ ತಲೆಯ ಹಿಂಭಾಗದ ಮಧ್ಯದವರಿಗೆ ಸುಮಾರು15 ಸೆಂಮೀ ಉದ್ದ ಸುಮಾರು 5 ಸೆಂಮೀ ಅಗಲ ,

4 ಸೆಂಮೀ ಆಳದ  ಕತ್ತರಿಸಿದಂತಹ ರಕ್ತಗಾಯವಾಗಿ, ಮೂಳೆ ಮತ್ತು ಮೆದುಳು ಭಾಗ ಕಾಣುತ್ತಿರುತ್ತದೆ.

2) ತಲೆಯಭಾಗದ ನೆತ್ತಿಯ ಮೇಲೆ 0.8 ಸೆಂಮೀ ಉದ್ದ , 0.3 ಸೆಂಮೀ ಅಗಲದ ಕತ್ತರಿಸಿದಂತಹ ರಕ್ತಗಾಯ .

3) ಎಡಕಿವಿಯ ತಲೆಯ ಹಿಂಭಾಗದಲ್ಲಿ 0.5 ಸೆಂಮೀ ಉದ್ದ ,  0.1 ಸೆಂಮೀ ಅಗಲ ಇದರ ಪಕ್ಕ 5 ಸೆಂಮೀ ಉದ್ದ , 2 ಸೆಂಮೀ ಅಗಲದ ಕತ್ತರಿಸಿದಂತಹ ರಕ್ತಗಾಯ

4) ತಲೆಯ ಹಿಂಭಾಗ 0.4 ಸೆಂಲಮೀ ಉದ್ದ , 0.2 ಸೆಮೀ ಅಗಲದ ಕತ್ತರಿಸಿದಂತಹ ರಕ್ತ ಗಾಯ ,

5) ಬಲಮೊಣಕೈದ ಹತ್ತಿರ 1 ಇಂಚು ಉದ್ದ ದ 2 ರಕ್ತ ಗಾಯಗಳು

6) ಬಲತೊಡೆಯ ಮೇಲೆ 0.6 ಸೆಂಮೀ ಉದ್ದದ 3 ಗೀಚಿದಂತಹ ರಕ್ತಗಾಯಗಳು

7) ಬಲಕಣಕಾಲಿನ ಹತ್ತಿರ 1 ಸೆಂಮೀ ರಕ್ತಗಾಯವಾಗಿರುತ್ತದೆ.

ಶವಪಂಚನಾಮೆಯನ್ನು ಈಗಾಗಲೇ ನಿಪಿ-10 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು. ಸಹಪಂಚನಾಮೆಯ ಕಾಲಕ್ಕೆ ಕಲಂ.9 ರಲ್ಲಿ ಮೃತನ ಸಂಬಂದಿಕರಾದ ಚಾಸಾ-13 ಮತ್ತು 14 ರವರ ಹೇಳಿಕೆಗಳನ್ನು ಮತ್ತು ಕಲಂ.10 ರಲ್ಲಿ

ಚಾಸಾ-15 ಮತ್ತು ಚಾಸಾ-16 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

4) ಅದೇ ದಿನ ಮೃತನ ಶವದ ಬೆಂಗಾವಲಿನಲ್ಲಿ ಇದ್ದ ಹೆಚ್ ಸಿ 342 ಚಾಸಾ-29 ರವರು ಮೃತನ ಮೈಯ ಮೇಲೆ ಇದ್ದ ರಕ್ತದ ಕಲೆಗಳು ಆಗಿರುವ ಬಟ್ಟೆಗಳಾದ ಒಂದು ಕಾಪಿ ಕಲರ್ ನ ಗೀರುಗಳುಳ್ಳ ತುಂಬು ತೋಳಿನ ಶರಟ್ , ನೀಲಿ ಬಣ್ಣದ ರೆಡಿಮೆಡ್ ಜೀನ್ಸ್ ಪ್ಯಾಂಟ್ , ಪಾಚಿ ಹಸಿರು ಬಣ್ಣದ ರೆಡಿಮೆಡ್ ಅಂಡರ್ ವೇರ್ , 2 ಎಳೆಯ ಕಪ್ಪು ಉಡುದಾರ , ಬಲಕೈನಲ್ಲಿ ಇದ್ದ ಕೆಂಪು ದಾರವನ್ನು ಹಾಜರುಪಡಿಸಿದ್ದು ಇವುಗಳನ್ನು ಪಂಚರಾದ ಚಾಸಾ-19,20 ರವರ ಸಮಕ್ಷಮ ಮಧ್ಯಾಹ್ನ 1 ಗಂಟೆಯಿಂದ 2 ಗಂಟೆಯವರಿಗೆ ಪಂಚನಾಮೆ ಜರೂಗಿಸಿ ಅವುಗಳನ್ನು ಅಮಾನತ್ತುಪಡಿಸಿಕೊಂಡಿಸಿರುತ್ತೇವೆ. ಅವುಗಳನ್ನು ಮಾಲುಪಟ್ಟಿ ಸಂಖ್ಯೆ 16/20 ರಲ್ಲಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಮೃತನ ಮೈಯ ಮೇಲಿನ ಬಟ್ಟೆಗಳ ಅಮಾನತ್ತುಪಂಚನಾಮೆಯನ್ನು ಈಗಾಗಲೇ ನಿಪಿ-25 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ-25(ಬಿ) ಎಂದು ಗುರುತಿಸಲಾಯಿತು. ಮೃತನ ಮೈಯ ಮೇಲೆ ಇದ್ದ ಬಟ್ಟೆಗಳು ನ್ಯಾಯಾಲಯದ ಮುಂದೆ ಇದ್ದು ಅವುಗಳನ್ನು ಸಾಕ್ಷಿ ನೋಡಿ

ಗುರುತಿಸಿದ್ದು ಅವುಗಳನ್ನು ಈಗಾಗಲೇ ಮುಮಾ-1 ರಿಂದ 5 ಎಂದು ಗುರುತಿಸಲಾಗಿದೆ.

5) ಅದೇ ದಿನ ಚಾಸಾ-17 ರಿಂದ 20 ಹಾಗೂ 29 ರವರುಗಳ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ . ದಿ 01-02-2020 ರಂದು ಈಗಾಗಲೇ ಆರೋಪಿತರ ಪತ್ತೆಗೆ ನೇಮಿಸಿದ್ದ ಸಿಬ್ಬಂದಿಗಳಾದ ಚಾಸಾ-26,27 ಹಾಗೂ 35 ರವರುಗಳು ಈ ಕೇಸಿನ ಆರೋಪಿಗಳಾದ ಭರತ್ ಬಿನ್ ಲೇಟ್ ಮಹಾದೇವಯ್ಯ , ಕಾಂತರಾಜು ಎಂ ಅಲಿಯಾಸ್ ಕಾಂತ ಬಿನ್ ಲೇಟ್ ಮಹಾದೇವಯ್ಯ ಇವರುಗಳನ್ನು ಅವರಿಗೆ ದೊರೆತ ಮಾಹಿತಿಯನ್ನು ಆಧಾರಿಸಿ ನೆಲಮಂಗಲದ ಮಾದನಾಯಕನಹಳ್ಳಿಯ ಸಿದ್ದನಹೊಸಹಳ್ಳಿಗೆ ಹೋಗುವ ಕ್ರಾಸ್ ಬಳಿ ವಶಕ್ಕೆ ಪಡೆದು , ಅದೇ ದಿನ 7.45 ಗಂಟೆ ಸಮಯಕ್ಕೆ ನನ್ನ ಮುಂದೆ ವರದಿಯೊಂದಿಗೆ ಹಾಜರುಪಡಿಸಿರುತ್ತಾರೆ. ವರದಿಯನ್ನು ಈಗಾಗಲೇ ನಿಪಿ-32 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ-32(ಬಿ)ಎಂದು ಗುರುತಿಸಲಾಯಿತು. ನಂತರ ಸದರಿ ಆರೋಪಿಗಳನ್ನು ವಿಚಾರಣೆ ಮಾಡಲಾಗಿ ಆರೋಪಿತರು ತಾವು ಕೊಲೆ ಮಾಡಿರುವುದು ಒಪ್ಪಿಕೊಂಡಿದ್ದರಿಂದ ಸದರಿಯವರನ್ನು ದಸ್ತಗಿರಿ ಮಾಡಿ , ದಸ್ತಗಿರಿ ನಿಯಮಗಳನ್ನು ಪಾಲಿಸಿ ನಂತರ ಕೂಡಲೇ ಪಂಚರಾದ ಚಾಸಾ-21,22 ರವರುಗಳನ್ನು ಹಾಜರುಪಡಿಸಿಕೊಂಡು ಅವರ ಸಮಕ್ಷಮ

ಆರೋಪಿಗಳ ಸ್ವಇಚ್ಛಾ ಹೇಳಿಕೆಗಳನ್ನು ಮಾಡಿಕೊಳ್ಳಲಾಯಿತು. ಸದರಿ ಆರೋಪಿಗಳು ತಮ್ಮ ಸ್ವಇಚ್ಛಾ ಹೇಳಿಕೆಯಲ್ಲಿ ತಮ್ಮ ಜೊತೆ ಬಂದರೆ ತಾವು ಕೊಲೆ ಮಾಡಿದ ಸ್ಥಳವನ್ನು ತೋರಿಸುವುದಾಗಿ ಹೇಳಿರುತ್ತಾರೆ. ಆರೋಪಿ ಭರತ್ ನು ಸ್ವಇಚ್ಛಾ ಹೇಳಿಕೆಯನ್ನು ನಿಪಿ-33 ಎಂದು, ನೀವು ನನ್ನನ್ನು ಕರೆದುಕೊಂಡು ಹೋದರೆ ....... ತೋರಿಸಿ ನಮ್ಮ ಮುಂದೆ ಹಾಜರುಪಡಿಸುತ್ತೇನೆ ಎನ್ನುವ ಭಾಗವನ್ನು ನಿಪಿ-33(ಎ) ಎಂದು ಗುರುತಿಸಲಾಯಿತು. ಆರೋಪಿಯ ಸಹಿಯನ್ನು ನಿಪಿ-33(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-33(ಸಿ) ಎಂದು ಗುರುತಿಸಲಾಯಿತು.

6) ಆರೋಪಿ ಕಾಂತರಾಜು ಇತನ ಸ್ವಇಚ್ಛಾಹೇಳಿಕೆಯನ್ನು ನಿಪಿ-34 ಎಂದು, ನೀವು ನನ್ನನ್ನು ಕರೆದುಕೊಂಡು ಹೋದರೆ ....... ತೋರಿಸಿ ನಮ್ಮ ಮುಂದೆ ಹಾಜರುಪಡಿಸುತ್ತೇನೆ ಎನ್ನುವ ಭಾಗವನ್ನು ನಿಪಿ-34(ಎ) ಎಂದು ಗುರುತಿಸಲಾಯಿತು. ಆರೋಪಿಯ ಸಹಿಯನ್ನು ನಿಪಿ-34(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-34(ಸಿ) ಎಂದು ಗುರುತಿಸಲಾಯಿತು.

7) ನಮ್ಮ ಸಿಬ್ಬಂದಿಗಳಾದ ಚಾಸಾ-26,27,31 ರಿಂದ 37 ರವರ ಬೆಂಗಾವಲಿನಲ್ಲಿ 2 ಸರ್ಕಾರಿ ಜೀಪ್ ನಲ್ಲಿ ಆರೋಪಿತರನ್ನು ಕರೆದುಕೊಂಡು ಅವರು ತೋರಿಸಿದಂತೆ ಹೊರಟಿದ್ದು , ನಂತರ ಆರೋಪಿತರು ತೋರಿಸಿದ ಒಂದು ಸ್ಥಳದಲ್ಲಿ ನಿಲ್ಲಿಸಿ ವಾಹನದಿಂದ ಕೆಳಗೆ ಇಳಿದಿದ್ದು ಸದರಿಯವರುತಾವು ಪಾಲನೇತ್ರಯ್ಯರವರನ್ನು ಕೊಲೆ ಮಾಡಿದ ಸ್ಥಳ ಇದೆಯೆಂದು ಆರೋಪಿಗಳು ತೋರಿಸಿದ್ದು , ಆ ಸ್ಥಳದಲ್ಲಿ ಪಂಚರ ಸಮಕ್ಷಮ ಬೆಳಗ್ಗೆ 11.45 ಗಂಟೆಯಿಂದ 12.45 ಗಂಟೆಯವರಿಗೆ ಸ್ಥಳಪಂಚನಾಮೆಯನ್ನುಕೈಗೊಂಡಿರುತ್ತೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ-14 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-14(ಡಿ) ಎಂದು ಗುರುತಿಸಲಾಯಿತು. ಆರೋಪಿಗಳ ಸಹಿಗಳನ್ನು ನಿಪಿ-14(ಇ) ಮತ್ತು (ಎಫ್) ಎಂದು ಗುರುತಿಸಲಾಯಿತು.

8) ನಂತರ ಆರೋಪಿತರು ಪುನಃ ನಮ್ಮನ್ನು ಕರೆದುಕೊಂಡು ಹೋದರೆ ಕೃತ್ಯಕ್ಕೆ ಬಳಸಿದ ವಾಹನ ಮತ್ತು ಮಚ್ಚನ್ನು ತೋರಿಸಿಕೊಡುವುದಾಗಿ ತಿಳಿಸಿದರ ಮೇರೆಗೆ ಮೇಲ್ಕಂಡ ವಾಹನಗಳಲ್ಲಿ ಸಿಬ್ಬಂದಿ ಮತ್ತು ಪಂಚರೊಂದಿಗೆ ಕರೆದುಕೊಂಡು ಹೊರಟಿದ್ದು , ನಂತರ ಅವರು ನಮ್ಮನ್ನು ಮತ್ತೊಂದು ಜಾಗಕ್ಕೆ ಕರೆದುಕೊಂಡು ಹೋಗಿಅಲ್ಲಿ ವಾಹನಗಳನ್ನು ನಿಲ್ಲಿಸುವಂತೆ ತಿಳಿಸಿದ್ದು , ಅಲ್ಲಿಂದ ಕೆಳಗೆ ಇಳಿದು , ಅಲ್ಲಿ

ಒಂದು ಸ್ಥಳಕ್ಕೆ ಕರೆದುಕೊಂಡು ಹೋಗಿದ್ದು , ಕ್ಯಾತ್ಸಂದ್ರ ಟ್ರಕ್ ಟರ್ಮಿನಲ್ ಒಳಭಾಗದ ರಸ್ತೆಯಲ್ಲಿ ನಿಲ್ಲಿಸಿದ್ದ ಒಂದು ಆಟೋ ರೀಕ್ಷಾ ವಾಹನವನ್ನು ತೋರಿಸಿದ್ದು , ಆಟೋವನ್ನು ಪರಿಶೀಲಿಸಲಾಗಿ ಆಟೋರೀಕ್ಷಾ ನಂಬರ್ ಕೆಎ-06-ಡಿ-5187 ಬಜಾಜ್ ಕಂಪನಿಯ ಪ್ರಯಾಣಿಕರ ಆಟೋವಾಗಿರುತ್ತದೆ. ಹಳದಿ ಬಣ್ಣದ ಟಾಪ್ , ಹಸಿರು ಬಣ್ಣದ ಬಾಡಿಯಾಗಿರುತ್ತದೆ. ನಂಬರ್ ಪ್ಲೇಟ್ ಹಳದಿ ಬಣ್ಣದ್ದು ಆಗಿರುತ್ತದೆ, ಹಿಂಭಾಗದಲ್ಲಿ ಟಿಟಿ ಪಿ ನಂಬರ್ 2382 ಎಂದು ಇರುತ್ತದೆ. ಈ ಆಟೋರೀಕ್ಷಾದ ಮುಂಭಾಗದ ಎಡಬದಿಯ ಬಾಡಿಯ ಮೇಲೆ ಹಾಗೂ ಚಾಲಕನ ಸೀಟ್ ನ ಎಡಬದಿಯಲ್ಲಿ ಗೇರ್ ಮೇಲೆ ಹಾಗೂ ಪ್ರೂಟ್ ರೆಸ್ಟ್ ಬಳಿ ರಕ್ತದಕಲೆಗಳುಇರುತ್ತದೆ. ಸದರಿ ರಕ್ತದ ಕಲೆಗಳನ್ನು ಒಂದು ಬ್ಲೇಡ್ ನಲ್ಲಿ ಕೆರೆದು ಸಂಗ್ರಹಿಸಿ ಪ್ಲಾಸ್ಟಿಕ್ ಡಬ್ಬದಲ್ಲಿ ಹಾಕಿ ಭದ್ರಪಡಿಸಲಾಯಿತು.

9) ನಂತರ ಅಲ್ಲಿ ಪಕ್ಕದ ಸೇತುವೆಯ ಚರಂಡಿಯ ಒಳಭಾಗದಲ್ಲಿ ಅವಿತಿಟ್ಟಿದ್ದ ಆರೋಪಿತರು ಕೃತ್ಯ ಮಾಡಿದ ಸಮಯದಲ್ಲಿ ಧರಿಸಿದ್ದರು ಎಂದು ತಿಳಿಸಿ ಬಟ್ಟೆಗಳನ್ನು ಮತ್ತು ಒಂದು ಮಚ್ಚನ್ನು ಹಾಜರುಪಡಿಸಿರುತ್ತಾರೆ. ಆರೋಪಿ ಭರತ ಇತನು ನಾನು ಮತ್ತು ನಮ್ಮ ಅಣ್ಣ ಕಾಂತರಾಜು ಇಬ್ಬರು ಕೃತ್ಯ ನಡೆದ ದಿನ ಧರಿಸಿದ್ದ ಬಟ್ಟೆಗಳನ್ನು ಬಿಚ್ಚಿಟ್ಟು ಕಾಂತ ಮನೆಯಿಂದ ತಂದ ಬಟ್ಟೆಗಳನ್ನು

ಬದಲಾಯಿಸಿಕೊಂಡು ನಂತರ ಬಟ್ಟೆಗಳು ಹಾಗೂ ಕೊಲೆ ಮಾಡಲು ಉಪಯೋಗಿಸಿದ ಮಚ್ಚನ್ನು ಚರಂಡಿಯಲ್ಲಿ ಬಚ್ಚಿಟ್ಟಿರುವುದಾಗಿ ತಿಳಿಸಿದ್ದು , ಭರತನು ಮುಂದಾಗಿ ಹೋಗಿ ಮಚ್ಚು ಮತ್ತು ಬಟ್ಟೆಗಳನ್ನು ತೆಗೆದು ಹಾಜರುಪಡಿಸಿದ್ದು , ಭರತನು ತಾನು ತೊಟ್ಟಿದ್ದ ಬಟ್ಟೆಗಳು ಎಂದು ಹೇಳಿ ತೋರಿಸಲಾದ ಬಟ್ಟೆಗಳನ್ನು ಪರಿಶೀಲಿಸಲಾಗಿ ಒಂದು ಕಾಪಿ ಬಣ್ಣದ ಅರ್ಧ ತೋಳಿನ ರೆಡಿಮೆಡ್ ಟೀ ಶರಟ್ ಇದರ ಮೇಲೆ ಒಬ್ಬ ಮನುಷ್ಯ ಗಡ್ಡ ಬಿಟ್ಟಿರುವ ಚುಟ್ಟ ಸೇದುತ್ತಿರುವ ಗೋಲ್ಡ್ ಬಣ್ಣವಿರುತ್ತದೆ. ಈ ಬಟ್ಟೆಯ ಮೇಲಿನ ಎದೆಯ ಭಾಗ ಮತ್ತು ತೋಳಿನ ಹತ್ತಿರ ಅಲ್ಲಲ್ಲಿ ರಕ್ತದಕಲೆಗಳು ಇರುತ್ತವೆ. ಪಾಚಿಕಲರ್ ನ ಜೀನ್ಸ್ ಪ್ಯಾಂಟ್ ಸದರಿ ಪ್ಯಾಂಟ್ ಹಿಂಭಾಗದ ಎರಡು ತೊಡೆಯ ಹತ್ತಿರ ಮುಂಭಾಗದ ಎರಡು ತೊಡೆಗಳ ಹತ್ತಿರ ಅಲ್ಲಲ್ಲಿ ರಕ್ತ ಸಿಡಿದಿರುವ ಕಲೆಗಳು ಕಂಡು ಬರುತ್ತದೆ . ನಂತರ ಆರೋಪಿ ಕಾಂತರಾಜು ಕೃತ್ಯವೆಸಗಿದ ಸಮಯದಲ್ಲಿ ತಾವು ತೊಟ್ಟಿದ್ದ ಬಟ್ಟೆಗಳನ್ನು ತೋರಿಸಿದ್ದು , ಅವುಗಳಲ್ಲಿ 1)ಡಿಸ್ಟೆಂಪರ್ ಬಣ್ಣದ ವಿ ನೇಕ್ ನ ಅರ್ಧ ತೋಳಿನ ಟೀ ಶರಟ್ ಆಗಿದ್ದು ಇದರ ಮೇಲೆನ ಮುಂಭಾಗ ಎರಡು ಕೈಗಳಲ್ಲಿ ಮೊಬೈಲ್ ಫೋನ್ ಹಿಡಿದಿರುವ ಡಿಸೈನ್ ಇರುವ ಚಿತ್ರವಿರುತ್ತದೆ. ಎಡಭುಜ ಎಡತೋಳಿನ ಭಾಗಗಳಲ್ಲಿ ರಕ್ತ ಸಿಡಿದಿರುವ ಕಲೆಗಳು ಇರುತ್ತವೆ. ಒಂದು ರೆಡಿಮೆಡ್ ನೀಲಿ ಬಣ್ಣದ ಬರ್ಮೋಡ ನಿಕ್ಕರ್ ಹಿಂಭಾಗದಲ್ಲಿ ಮತ್ತು ಮುಂಭಾಗದಲ್ಲಿ ಅಲ್ಲಲ್ಲಿ ರಕ್ತದ ಕಲೆಗಳು ಇರುತ್ತವೆ. ಕೃತ್ಯಕ್ಕೆ

ಉಪಯೋಗಿಸಿದ್ದು ಎಂದು ತಿಳಿಸಿ ಹಾಜರುಪಡಿಸಿದ ಮಚ್ಚನ್ನು ಪರಿಶೀಲಿಸಲಾಗಿ ಸದರಿ ಮಚ್ಚು ಪ್ಲಾಸ್ಟಿಕ್ ಹಿಡಿ ಇರುವ ಒಂದು ಕಬ್ಬಿಣದ ಮಚ್ಚು ಆಗಿದ್ದು 50 ಸೆಂಮೀ ಉದ್ದವಿರುತ್ತದೆ. ಅದರ ಪ್ಲಾಸ್ಟಿಕ್ ಹಿಡಿ 22 ಸೆಂಮೀ ಇರುತ್ತದೆ. ಒಂದು ಕಡೆ ಅದರ ಬಾಯಿ ಹರಿತವಾಗಿದ್ದು ಮಚ್ಚಿನ ಮುಂಭಾಗದ ರಕ್ತದ ಕಲೆಗಳು ಇರುತ್ತವೆ. ಬಟ್ಟೆಗಳು ಹಾಗೂ ಕೃತ್ಯ ಕ್ಕೆ ಬಳಸಿದ ಮಚ್ಚನ್ನು ಮತ್ತು ಪ್ಲಾಸ್ಟಿಕ್ ಡಬ್ಬದಲ್ಲಿ ಶೇಖರಿಸಿದ ರಕ್ತದ ಕಲೆಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯ ಚೀಲದಲ್ಲಿ ಭದ್ರಪಡಿಸಿ ಆರ್ ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲ್ ಮಾಡಿ ಪಂಚರ ಸಹಿ ಇರುವ ಚೀಟಿಗಳನ್ನು ಅಂಟಿಸಲಾಯಿತು. ಆಟೋವನ್ನು ಸಹ ವಶಕ್ಕೆ ಪಡೆದುಕೊಳ್ಳಲಾಯಿತು. ಸದರಿ ಪಂಚನಾಮೆಯನ್ನು ಮಧ್ಯಾಹ್ನ 1.05 ಗಂಟೆಯಿಂದ 2.30 ಗಂಟೆಯವರಿಗೆ ಕೈಗೊಳ್ಳಲಾಗಿದೆ. ಅಮಾನತ್ತು ಪಂಚನಾಮೆಯನ್ನು ಈಗಾಗಲೇ ನಿಪಿ-15 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-15(ಡಿ)ಎಂದು ಗುರುತಿಸಲಾಯಿತು. ಆರೋಪಿಗಳ ಸಹಿಗಳನ್ನು ನಿಪಿ-15(ಇ)(ಎಫ್) ಎಂದು ಗುರುತಿಸಲಾಯಿತು. ನಂತರ ವಶಪಡಿಸಿಕೊಂಡ ವಸ್ತುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 17/20 ರಲ್ಲಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಳ್ಳಲಾಯಿತು. ಅಮಾನತ್ತುಪಡಿಸಿಕೊಂಡಿರುವ ಮುದ್ದೆ ಮಾಲುಗಳು ನ್ಯಾಯಾಲಯದ ಮುಂದೆ ಇದ್ದು ಅವುಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು

ಈಗಾಗಲೇ ಮುಮಾ-9 ರಿಂದ 14 ಎಂದು ಗುರುತಿಸಲಾಗಿದ್ದು , ಅಮಾನತ್ತುಪಡಿಸಿಕೊಂಡಿರುವ 7 ಆಟೋದ ಪೊಟೋಗಳನ್ನು ನಿಪಿ-30 ಎಂದು ಒಟ್ಟಾಗಿ ಗುರುತಿಸಲಾಯಿತು.

10)ನಂತರ ಅದೇ ದಿನ ಸಾಕ್ಷಿದಾರರಾದ ಚಾಸಾ-21,22,26,27 ,32,33 ರವರ ಹೇಳಿಕೆಗಳನ್ನು ಪಡೆದುಕೊಳ್ಳಲಾಯಿತು. ನಂತರ ಚಾಸಾ-1 ರವರ ಮರುಹೇಳಿಕೆಯನ್ನು ಪಡೆದುಕೊಳ್ಳಲಾಯಿತು. ನಂತರ ಅದೇ ದಿನ ಆರೋಪಿತರಿಗೆ ವೈದ್ಯಕೀಯ ತಪಾಸಣೆ ಮಾಡಿ ತನಿಖೆಗೆ ಅವಶ್ಯಕತೆ ಇಲ್ಲದಿರುವ ಕಾರಣದಿಂದ ಮಾನ್ಯನ್ಯಾಯಾಲಯದ ಮುಂದೆ ಸಿಬ್ಬಂದಿಗಳ ಬೆಂಗಾವಲಿನೊಂದಿಗೆ ಹಾಜರುಪಡಿಸಲಾಯಿತು.

11) ಅದೇ ದಿನ ಸಾಕ್ಷಿದಾರರಾದ ಚಾಸಾ-3 ರಿಂದ 8 ರವರುಗಳ ಹೇಳಿಕೆಗಳನ್ನು ಪಡೆದುಕೊಳ್ಳಲಾಯಿತು. ಚಾಸಾ-13 ಮತ್ತು 14 ರವರುಗಳ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

12) ದಿ 01-02-2020 ರಂದು ಕೃತ್ಯನ ಡೆದ ಸ್ಥಳದ ನಕ್ಷೆ ತಯಾರು ಮಾಡಿಕೊಡುವಂತೆ ಮನವಿಯನ್ನು ಚಾಸಾ-23 ರವರಿಗೆ ಸಲ್ಲಿಸಲಾಯಿತು. ಮನವಿ ಪತ್ರವನ್ನು ಈಗಾಗಲೇ ನಿಪಿ-17 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ-17(ಎ) ಎಂದು ಗುರುತಿಸಲಾಯಿತು.

13) ದಿ 02-02-2020 ರಂದು  ಚಾಸಾ-2,15 ಮತ್ತು 16 ರವರುಗಳ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

14) ದಿ 07-02-2020 ರಂದು ಚಾಸಾ-24 ರವರಿಂದ ಮೃತ ಪಾಲನೇತ್ರಯ್ಯ ರವರ ಶವಪರೀಕ್ಷ ವರದಿಯನ್ನು ಪಡೆದುಕೊಂಡಿರುತ್ತೇನೆ. ಶವಪರೀಕ್ಷ ವರದಿಯನ್ನು ಈಗಾಗಲೇ ನಿಪಿ-19 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-19(ಬಿ) ಎಂದು ಗುರುತಿಸಲಾಯಿತು.

15) ದಿ 16-02-2020 ರಂದು ಮೇಲ್ಕಂಡ ಅಮಾನತ್ತುಪಂಚನಾಮೆಗಳ ಮೂಲಕ ವಶಪಡಿಸಿಕೊಳ್ಳಲಾಗಿದ್ದ ವಸ್ತುಗಳನ್ನು ಹಾಗೂ ಮೃತನ ಶವಪರೀಕ್ಷ ಕಾಲದಲ್ಲಿ ವೈದ್ಯರು ಸಂಗ್ರಹಿಸಿದ್ದ ರಕ್ತದ ಮಾದರಿಯನ್ನು ಸಿಬ್ಬಂದಿಗಳಾದ ಚಾಸಾ-34 ರವರ ಮುಖಾಂತರ ಬೆಂಗಳೂರು ಎಫ್ ಎಸ್ ಎಲ್ ಗೆ ಅಭಿಪ್ರಾಯ ವರದಿಗಾಗಿ ಕಳುಹಿಸಿಕೊಡಲಾಯಿತು. ಸದರಿಯವರು ಅವುಗಳನ್ನು ಎಫ್ ಎಸ್ ಎಲ್ ಗೆ ನೀಡಿ ದಿ 18-02-20 ರಂದು ಸ್ವೀಕೃತಿಯನ್ನು ಪಡೆದು ತಂದು ಹಾಜರುಪಡಿಸಿರುತ್ತಾರೆ.  ಎಫ್ ಎಸ್ ಎಲ್ ಸ್ವೀಕೃತ ದಾಖಲೆಯನ್ನು ಈಗಾಗಲೇ ನಿಪಿ-23 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು.

16) ದಿ 20-02-20 ರಂದು ಮಾನ್ಯ ಘನ ನ್ಯಾಯಾಲಯದ ಆದೇಶದ ಮೇರೆಗೆ ಕೃತ್ಯ ನಡೆದ ಸ್ಥಳದಲ್ಲಿ ವಶಪಡಿಸಿಕೊಂಡಿದ್ದ ಕೆಎ-06-ಎಪಿ-6355 ಬುಲೆಟ್ ದ್ವಿಚಕ್ರವಾಹನವನ್ನು ಮಾಲೀಕರ ವಶಕ್ಕೆ ಬಿಡುಗಡೆ ಮಾಡಲಾಯಿತು. ಬಿಡುಗಡೆಯ ಸಮಯದಲ್ಲಿ ಸದರಿ ದ್ವಿಚಕ್ರವಾಹನದ ಪೋಟೋ ತೆಗೆಸಲಾಯಿತು. ಪೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ-3 ರಿಂದ 5 ಎಂದು ಗುರುತಿಸಲಾಗಿದೆ .

17) ದಿ 21-03-2020 ರಂದು ಚಾಸಾ-23 ರವರಿಂದ ಕೃತ್ಯ ನಡೆದ ಸ್ಥಳದ ನಕ್ಷೆಯನ್ನು ಪಡೆದುಕೊಳ್ಳಲಾಯಿತು. ನಕ್ಷೆಯನ್ನು ಈಗಾಗಲೇ ನಿಪಿ-18 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ-18(ಬಿ) ಎಂದು ಗುರುತಿಸಲಾಯಿತು.

18) ದಿ 31-03-2020 ರಂದು ಚಾಸಾ-26,30,31 ರವರಿಂದ ಕಲಂ.65(ಬಿ) ಪ್ರಕಾರ ಪ್ರಮಾಣ ಪತ್ರ ಪಡೆದುಕೊಳ್ಳಲಾಯಿತು. ಚಾಸಾ-26 ರವರು ನೀಡಿದ ಕಲಂ.65(ಬಿ) ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-26 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ-26(ಬಿ) ಎಂದು ಗುರುತಿಸಲಾಯಿತು. ಚಾಸಾ-27 ರವರು ನೀಡಿದ ಕಲಂ.65(ಬಿ)

ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-28 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ-28(ಬಿ) ಎಂದು ಗುರುತಿಸಲಾಯಿತು. ಚಾಸಾ-31 ರವರು ನೀಡಿದ ಕಲಂ.65(ಬಿ) ಪ್ರಮಾಣ ಪತ್ರವನ್ನು ಈಗಾಗಲೇ ನಿಪಿ-24 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ-24(ಬಿ) ಎಂದು ಗುರುತಿಸಲಾಯಿತು.

19) ದಿ 04-04-2020 ರಂದು ಚಾಸಾ-25 ರವರಿಂದ ಕೃತ್ಯ ನಡೆದ ಸ್ಥಳದಲ್ಲಿ ವಿದ್ಯುತ್ ಚ್ಛಕ್ತಿ ಚಾಲ್ತಿಯಲ್ಲಿ ಇತ್ತು ಎನ್ನುವ ಬಗ್ಗೆ ವರದಿಯನ್ನು ಪಡೆದುಕೊಳ್ಳಲಾಯಿತು. ಬೆಸ್ಕಾಂ ರವರ ನೀಡಿದ ಪತ್ರವನ್ನು ನಿಪಿ-13 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ-13(ಬಿ) ಎಂದು ಗುರುತಿಸಲಾಯಿತು. ತನಿಖೆಯ ಕಾಲದಲ್ಲಿ ಕೃತ್ಯ ನಡೆದ ಸ್ಥಳದ ಪಂಚನಾಮೆ ಹಾಗೂ ಆರೋಪಿತರಿಂದ ವಶಪಡಿಸಿಕೊಂಡ ಅಮಾನತ್ತುಪಂಚನಾಮೆ, ಶವಪಂಚನಾಮೆಯ ಕಾಲದಲ್ಲಿ ನಮ್ಮಸಿಬ್ಬಂದಿಗಳಾದ ಚಾಸಾ-26,30,31 ರವರಿಂದ ಫೋಟೋ ಮತ್ತು ವಿಡಿಯೋತೆಗೆಸಲಾಗಿರುತ್ತದೆ. ಫೋಟೋ ಮತ್ತು ವಿಡಿಯೋ ಇರುವ ಸಿಡಿಯನ್ನು ಈಗಾಗಲೇ ನಿಪಿ-26,27 ಎಂದು ಗುರುತಿಸಲಾಗಿದೆ.

20) ತನಿಖಾ ಸಮಯದಲ್ಲಿ ಆಟೋ ರೀಕ್ಷ ನಂಬರ್ ಕೆಎ-06-ಡಿ-5187 ರ ದೃಡೀಕೃತ ಆರ್ ಸಿ ಪ್ರತಿಯನ್ನು ನಿಪಿ-35 ಎಂದು , ಸಾಕ್ಷಿಯ ಸಹಿಯನ್ನು ನಿಪಿ-35(ಎ) ಎಂದು ಗುರುತಿಸಲಾಯಿತು. ಬುಲೆಟ್ ದ್ವಿಚಕ್ರವಾಹನದ ಕೆಎ-06-ಇಪಿ-6355 ನ ದೃಡೀಕೃತ ಆರ್ ಸಿ ಪ್ರತಿಯನ್ನು ನಿಪಿ-36 ಎಂದು ಗುರುತಿಸಲಾಯಿತು.

21) ನಂತರ ಎಫ್ ಎಸ್ ಎಲ್ ವರದಿ ಬರಬೇಕಾಗಿದ್ದು , ಬಂದ ನಂತರ ಕಲಂ.173(8) ಪ್ರಕಾರ ಹೆಚ್ಚುವರಿ ವರದಿ ಸಲ್ಲಿಸುವುದಾಗಿ ನಮೂದಿಸಿ ಆರೋಪಿ-1 ಮತ್ತು 2 ರವರ ವಿರುದ್ದ ತನಿಖೆಯಲ್ಲಿ ಆರೋಪ ಸಾಭೀತಾಗಿದ್ದರಿಂದ ಆರೋಪಿತರ ವಿರುದ್ದಕಲಂ.302 ಐಪಿ ಸಿ ರೀತ್ಯಾ ದೋಷಾರೋಪಣ ಪಟ್ಟಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಯಿತು.

22) ದಿ 23-05-2020 ರಂದು ಎಫ್ ಎಸ್ ಎಲ್ ವರದಿಯನ್ನು ಸ್ವೀಕರಿಸಿಕೊಂಡಿರುತ್ತೇನೆ . ಎಫ್ ಎಸ್ ಎಲ್ ವರದಿಗಳನ್ನು ಈಗಾಗಲೇ ನಿಪಿ-22,23 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ-22(ಎ) ಎಂದು ಗುರುತಿಸಲಾಯಿತು.

23) ನಂತರ ದಿ 12-08-20 ರಂದು ತುಮಕೂರು ಜಿಲ್ಲಾ ಆಸ್ಪತ್ರೆಯ ವೈದ್ಯರಿಂದ ಕೃತ್ಯಕ್ಕೆ ಬಳಸಿದ ಮಚ್ಚನ್ನು ಹಾಗೂ ಎಫ್ ಎಸ್ ಎಲ್ ವರದಿಯನ್ನು ನೀಡಿ ವೈದ್ಯರ ಅಂತಿಮ ಅಭಿಪ್ರಾಯ ವರದಿ ಪಡೆದುಕೊಳ್ಳಲಾಯಿತು. ದಿ 12-08-20 ರಂದು ವೈದ್ಯಾಧಿಕಾರಿಗಳಿಂದ ಮಚ್ಚನ್ನು ಹಾಜರುಪಡಿಸಿ ವರದಿಯನ್ನು ಪಡೆದಿದ್ದು ಅದನ್ನು ಈಗಾಗಲೇ ನಿಪಿ-20 ಎಂದು ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ-20(ಬಿ) ಎಂದು ಗುರುತಿಸಲಾಯಿತು. ವೈದ್ಯರ ಅಂತಿಮ ಅಭಿಪ್ರಾಯ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-21 ಎಂದು ಗುರುತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ-21(ಬಿ) ಎಂದು ಗುರುತಿಸಲಾಯಿತು. 1 ನೇ ಆರೋಪಿಯನ್ನು ನ್ಯಾಯಾಲಯದ ಮುಂದೆ ಮೊಬೈಲ್ ವಿಸಿ ಮುಖಾಂತರ ಹಾಜರಪಡಿಸಿದ್ದು ಅವರನ್ನು ನೋಡಿ ಗುರುತಿಸಿರುತ್ತಾರೆ. 2 ನೇ ಆರೋಪಿ ಗೈರುಹಾಜರಾಗಿದ್ದು , ಹಾಜರಾತಿ ವಿನಾಯತಿ ಅರ್ಜಿಯನ್ನು ಸಲ್ಲಿಸಿರುವುದರಿಂದ ಅವರ ಗುರುತಿಸುವಿಕೆಗೆ ತಕರಾರು ಇರುವುದಿಲ್ಲ.

**ಪಾಟೀ ಸವಾಲು 1 ಮತ್ತು 2 ಆರೋಪಿಯ ಪರ ಶ್ರೀ ಕೆ ಹೆಚ್ ಜಿ ವಕೀಲರಿಂದ ಃ-**

ಆರೋಪಿ ಪರ ವಕೀಲರ ಕೋರಿಕೆಯ ಮೇರಗೆ ಪಾಟೀ ಸವಾಲು ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ

1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು.